**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.398/1992**

**ಪಿ.ಡಬ್ಲ್ಯೂ.1 – ಎಂ. ವೆಂಕಟೇಶ**

**ಪ್ರಮಾಣೀಕರಿಸಿದ ದಿನಾಂಕ: 05.04.2021**

**ಮುಂದುವರೆದ ಪಾಠಿ ಸವಾಲು: 8ನೇ ಪ್ರತಿವಾದಿ ಪರ ವಕೀಲರಿಂದ : –**

5ನೇ ಪ್ರತಿವಾದಿಗೆ ದೇವಮ್ಮ ಮತ್ತು ಪುಟ್ಟಮ್ಮ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. 8ನೇ ಪ್ರತಿವಾದಿಗೆ ವಸಂತಕುಮಾರ ಎನ್ನುವ ಮಗನಿದ್ದಾನೆ ಎಂದರೆ ಸರಿ. 7ನೇ ಪ್ರತಿವಾದಿಗೆ ಕುಮಾರ ಮತ್ತು ರಂಗ ಎನ್ನುವ ಮಕ್ಕಳಿದ್ದಾರೆ ಎಂದರೆ ಸರಿ. ನಾನು ಈ ದಾವೆಯನ್ನು ಪೂಜಮ್ಮರ ಜೊತೆ ಸೇರಿ ಹಾಕಿದ್ದೇನೆ. ಈ ದಾವೆಯ ಕುರಿತು ಪೂಜಮ್ಮರವರಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಪತ್ರಕ್ಕೆ ನಾನು ಮತ್ತು ಪೂಜಮ್ಮ ಸೇರಿ ಪಿ.ಕೃಷ್ಣಪ್ಪ ಎನ್ನುವ ವಕೀಲರಿಗೆ ಮಾಹಿತಿ ನೀಡಿದ್ದೇವೆ. ಆ ವಕೀಲರ ಕಛೇರಿಗೆ ಪೂಜಮ್ಮ ಭೇಟಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಕೀಲರ ಕಛೇರಿಗೆ ಪೂಜಮ್ಮ ಹೋಗಿದ್ದ ಬಗ್ಗೆ ಸಾಕ್ಷಿ ಇದೆಯೇ ಎಂದರೆ ನಾನೇ 2–3 ಬಾರಿ ಕರೆದುಕೊಂಡು ಹೋಗಿದ್ದೆ. ಪಿ.ಕೃಷ್ಣಪ್ಪರವರ ಕಛೇರಿ ಈಗಲೂ ಬೆಂಗಳೂರಿನಲ್ಲಿ ಇದೆ ಎಂದರೆ ಇರಬಹುದು. ನಾನು ದಾವೆಯನ್ನು ದಾಖಲಿಸುವ ಸಮಯದಲ್ಲಿ ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಓ.ಎಸ್.ನಂ.:256/1995ರ ಈ ದಾವೆಯ 2ನೇ ಪ್ರತಿವಾದಿ ಪಕ್ಷಗಾರರಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನಿ.ಪಿ.1, 2, 21 ರಿಂದ 25ನ್ನು ಈ ದಾವೆಗಾಗಿ ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಎಂದಿಗೂ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಠಿ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**